ಆ) 5 ಯೋಜನೆಗಳಲ್ಲಿ ಯರಡೋಣ ಹಾಗೂ ಮಸ್ಕಿ ಯೋಜನೆಗಳು ಪೂರ್ಣಗೊಂಡಿದ್ದು, ಕಾರ್ಯನಿರ್ವಹಿಸುತ್ತಿವೆ. ಕಾಟಗಲ್ ಮತ್ತು ಹುನಕುಂಟಿ ಯೋಜನೆಗಳು ತಾಂತ್ರಿಕ ಅನುಮೋದನೆಗೊಂಡಿದ್ದು, ಟೆಂಡರ ಪ್ರಕ್ರಿಯೆಯಲ್ಲಿವೆ. ಯಲಗಟ್ಟ ಯೋಜನೆಯ ಡಿ.ಎಸ್.ಆರ್. ತಯಾರಿಕೆ ಹಂತದಲ್ಲಿವೆ.

ಇ) ಟೆಂಡರ್ ಪ್ರಕ್ರಿಯೆಯಲ್ಲಿರುವ ಕಾಟಗಲ್ ಮತ್ತು ಹುನಕುಂಟಿ ಯೋಜನೆಗಳನ್ನು ಡಿಸೆಂಬರ–2015 ರೊಳಗೆ ಪೂರ್ಣಗೊಳ್ಳಲಿವೆ.

ರಾಯಚೂರು ಜಿಲ್ಲೆಯಲ್ಲಿರುವ ಡಿಸ್ಟಿಲರಿಗಳು

2614(2602); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ರಾಯಚೂರು ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಡಿಸ್ಟಿಲರಿಗಳ ಸಂಖ್ಯೆ ಎಷ್ಟು; ಇವುಗಳ ಕಾರ್ಯ ಕ್ಷಮತೆ ಎಷ್ಟು;

ಆ) ಕಳೆದ ಮೂರು ವರ್ಷಗಳಿಂದ ಈ ಡಿಸ್ಟಿಲರಿಗಳು ಅಬಕಾರಿ ಇಲಾಖೆಗೆ ಪಾವತಿಸಿರುವ ಶುಲ್ಕ ಎಷ್ಟು;

ಇ) ರಾಯಚೂರು ಜಿಲ್ಲೆಯ ಮದ್ಯ ಮಾರಾಟ ಈವರೆವಿಗೂ ನೀಡಲಾಗಿರುವ ಪರವಾನಗಿಗಳ ಸಂಖ್ಯೆ ಎಷ್ಟು; ಪರವಾನಗಿ ಪಡೆಯಲು ಇರುವ ಷರತ್ತುಗಳೇನು (ವಿವರ ನೀಡುವುದು)?

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಮಾನ್ಯ ಅಬಕಾರಿ ಸಚಿವರು)

ಅ) 2013–14ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಮೆ:ಸಾವರಿನ್ ಡಿಸ್ಟಿಲರೀಸ್ ಲಿ., ಎಂಬ ಹೆಸರಿನ ಒಂದು ಡಿಸ್ಟಿಲರಿ ಕಾರ್ಯ ನಿರ್ವಹಿಸುತ್ತಿದ್ದು, ಇದರ ಉತ್ಪಾದನಾ ಕಾರ್ಯ ಸಾಮರ್ಥ್ಯ ಪ್ರತಿದಿನ 1,80,000 ಲೀ ಮದ್ಯಸಾರವಾಗಿರುತ್ತದೆ.

ಆ) 2011–12 ₹ 63,49,908/–

2012–13 ₹ 78,34,962/–

2013–14 ₹ 62,62,500/–

ಇ) 2013–14ನೇ ಸಾಲಿಗೆ ರಾಯಚೂರು ಜಿಲ್ಲೆಯಲ್ಲಿ ಅಬಕಾರಿ ಇಲಾಖೆ ವತಿಯಿಂದ ಮದ್ಯ ಮಾರಾಟ ಮಾಡಲು 189 ವಿವಿಧ ಸನ್ನದುಗಳನ್ನು ನವೀಕರಿಸಲಾಗಿರುತ್ತದೆ.

ಕ್ರ.ಸಂ.	ಸನ್ನದಿನ ವಿಧ	ಸನ್ನದುಗಳ ಸಂಖ್ಯೆ
1	ಸಿಎಲ್–2	92
2	ಸಿಎಲ್–4	02
3	ಸಿಎಲ್–7	15
4	ಸಿಎಲ್–9	68
5	ಸಿಎಲ್–11ಸಿ	12
ಒಟ್ಟು		**189**

1992 ರಿಂದ ಹೊಸದಾಗಿ ಸಿಎಲ್–2 ಹಾಗೂ ಸಿಎಲ್–9 ಸನ್ನದು ಮಂಜೂರು ಮಾಡುವ ಸಂಬಂಧ ನಿರ್ಬಂಧವಿರುತ್ತದೆ. ನಿರ್ಬಂಧವಿರುವ ಹಿನ್ನೆಲೆಯಲ್ಲಿ, ಸನ್ನದು ಪರವಾನಗಿ ಮಂಜೂರು ಮಾಡಲು ಷರತ್ತುಗಳನ್ನು ವಿಧಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ರಸ್ತೆ ಕಾಮಗಾರಿ

2616(3324); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) 2013–14 ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಪ್ರಧಾನ ಮಂತ್ರಿಗಳ ಗ್ರಾಮೀಣ ಸಡಕ್ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳು ಯಾವುವು (ಕ್ಷೇತ್ರವಾರು ವಿವರ ನೀಡುವುದು);